ಇರುವುದಿಲ್ಲ. ಅಂಥ ಕಡೆ ಲಕ್ಷ, 2 ಲಕ್ಷಗಟ್ಟಲೆ ಜಲ ಸಂರಕ್ಷಣೆ ನೆಪದಲ್ಲಿ ಹಣ ಹಾಳಾಗುವ ಪರಿಸ್ಥಿತಿ ಇದೆ. ಆ ಜಲ ಸಂರಕ್ಷಣೆಯನ್ನು ಬದಲಾವಣೆ ಮಾಡಿ, ಎಲ್ಲಿ ಸವಳು-ಜವಳು ಜಮೀನಿದೆ, ಅಂಥ ಊರುಗಳಲ್ಲಿ, ಆ ಸವಳು-ಜವಳು ತೆಗೆಯುವಂಥ ನಾಲೆಗಳನ್ನು ಅಭಿವೃದ್ಧಿಪಡಿಸಲಿಕ್ಕೆ ಅಥವಾ ಒಳಚರಂಡಿ ಮಾಡಲು ಆ ಹಣವನ್ನು ಉಪಯೋಗ ಮಾಡಿದರೆ ಆ ಫಲವತ್ತಾದ ಜಮೀನನ್ನು ಸ್ವಲ್ಪವಾದರೂ ಉಳಿಸಲು ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳಬಯಸುತ್ತೇನೆ. ಏಕೆಂದರೆ, ನನ್ನ ತಾಲ್ಲೂಕಿನಲ್ಲಿ ವಿಶೇಷವಾಗಿ ಹೇಳಬೇಕಾದರೆ, ಹತ್ತಾರು ಹಳ್ಳಿಗಳು ನೂರಕ್ಕೆ 90ರಷ್ಟು ಜಮೀನುಗಳು ಸವಳು-ಜವಳಿನಿಂದ ಒಕ್ಕಲುತನವನ್ನೇ ನಿಲ್ಲಿಸುವ ಧಾರುಣ ಸ್ಥಿತಿ ಇದೆ. ಅದಕ್ಕಾಗಿ ಸರ್ಕಾರ ತೀವ್ರವಾದ ಗಮನವನ್ನು ಆ ಕಡೆ ಕೊಟ್ಟು ಆ ಜಮೀನನ್ನು ಉಳಿಸಿಕೊಡುವ ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾರಜೋಳರವರು ಕೇಳಿದ ಪ್ರಶ್ನೆಗೆ ನಾನು ಉತ್ತರ ಹೇಳಿದ್ದೇನೆ. ಈ ಸಮಸ್ಯೆ ಇಲ್ಲವೆಂದಲ್ಲ. ಇದೆ. ಆದರೆ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ನಾನು ಈಗಾಗಲೇ ಹೇಳಿದ ಹಾಗೆ, ಕೇವಲ 100 ಕೋಟಿ ರೂಪಾಯಿ ನಮ್ಮ ಮಲಪ್ರಭಾ ಮತ್ತು ಘಟಪ್ರಭಾ ಈ ಕಾಡಾಗಳಿಗೇ ಬೇಕಾಗುತ್ತದೆ. ಉಳಿದ ನಮ್ಮ ಅಪ್ಪರ್‌ಕೃಷ್ಣ ಮತ್ತು ತುಂಗಭದ್ರಾ ಈ ಕಾಡಾಗಳಿಗೆ ರೆಸ್ಪೆಕ್ಟೀವ್ಲಿ 152 ಕೋಟಿ ರೂಪಾಯಿ ಅಪ್ಪರ್‌ಕೃಷ್ಣಗೆ ಮತ್ತು ಸುಮಾರು 36 ಕೋಟಿ ರೂಪಾಯಿ ತುಂಗಭದ್ರಾಗೆ ಬೇಕಾಗುತ್ತದೆ. ಅಂದರೆ, ಟೋಟಲಿ 200 ಕೋಟಿ ರೂಪಾಯಿಗಳ ಮೇಲ್ಪಟ್ಟು ಹಣ ಬೇಕಾಗುತ್ತದೆ. ಆದರೆ, ನಾವು ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ತೆಗೆದುಕೊಳ್ಳಬೇಕೆಂದು ಹೇಳಿ ಪ್ರಯತ್ನ ಮಾಡಿದರೂ ಕೂಡ, ಈ ಒಂದು ಕೆಲಸಕ್ಕೆ ಹೆಚ್ಚಿನ ಹಣ ಇಲ್ಲ. ಅದಕ್ಕೆ ತಾವು ಹೇಳಿದಿರಿ ಮತ್ತು ಕಾರಜೋಳರವರ ಉದ್ದೇಶ ಕೂಡ ಅದೇ ಇದೆ. ಇದಕ್ಕೆ ಹೆಚ್ಚಿನ ಹಣ ಕೊಡಿಸಿ, ಈ ಸಮಸ್ಯೆ ಎಲ್ಲಿದೆ, ಅಲ್ಲಿ ಆದಷ್ಟು ಅದನ್ನು ಬಗೆಹರಿಸಬೇಕು, ಇಲ್ಲದಿದ್ದರೆ, ಶಾಶ್ವತವಾಗಿ ಆ ರೈತರ ಜಮೀನುಗಳು ಕೆಟ್ಟು ಹೋಗುತ್ತವೆ ಎನ್ನುವ ಪ್ರಸ್ತಾಪವನ್ನು ಅವರು ಮಾಡಿದ್ದಾರೆ. ನಾನು ಅದನ್ನು ಒಪ್ಪುತ್ತೇನೆ. ಆದರೆ, ಹಣದ ಕೊರತೆ ಇದ್ದ ಕಾರಣ, ತಕ್ಷಣ ಎಲ್ಲವನ್ನೂ ಮಾಡುವುದಕ್ಕಾಗುವುದಿಲ್ಲ. ಎಷ್ಟು ಹೆಚ್ಚಿನ ರೀತಿಯಲ್ಲಿ ನಾವು ತೆಗೆದುಕೊಳ್ಳಬಹುದೋ, ಅಷ್ಟು ನಾನು ಪ್ರಯತ್ನ ಮಾಡುತ್ತೇನೆ.

ಐ.ಪಿ.ಡಿ. ಸಾಲಪ್ಪನವರ ವರದಿ ಅನುಷ್ಠಾನ

29 (432) : ಶ್ರೀ ಅಂಜನೇಯ ಹೆಚ್. (ಭರಮಸಾಗರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಐ.ಪಿ.ಡಿ. ಸಾಲಪ್ಪನವರ ವರದಿಯನ್ನು ಸರ್ಕಾರ ಅಂಗೀಕರಿಸಿರುವುದೆ;
2) ಹಾಗಿದ್ದಲ್ಲಿ ಈ ವರದಿಯಲ್ಲಿರುವ ಶಿಫಾರಸ್ಸುಗಳು ಯಾವುವು;
3) ಈ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆಯೇ;
4) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು)

1) ಹೌದು.
2) ಪ್ರಮುಖ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ನೀಡಿದೆ.

3) ಎಲ್ಲಾ ಪ್ರಮುಖ ಶಿಫಾರಸ್ಸುಗಳನ್ನು ಜಾರಿ ಮಾಡಲಾಗಿದೆ.

4) ಉದ್ಭವಿಸುವುದಿಲ್ಲ.

ಅನುಬಂಧ

Important recommendation of Sri I.P.D. Salappa

1. All dry latrines in the town should be converted into flush type latrines.
2. There should be one sweeper for every 700 population in the case of Municipalities and 500 population in the case of the Corporations.
3. A minimum of 18% of the posts of Pourakarmikas should be reserved for SC/ST and recruitment to the said post may also be made from other communities.
4. All Pourakarmikas who are temporarily employed and who have put in continuous service of not less than one year, should be confirmed forthwith.
5. All the Pourakarmikas should be made to avail of one months leave in a block period of 2 years or 15 days leave in a year for the rest and relaxation.
6. In respect of women workers of Pourakarmikas maternity leave should be sanctioned as per K.C.S.R.
7. The timings of working of the Pourakarmikas should be as follows.

   6.00 AM to 10.00 AM.

   2.00 PM to 5.00 PM.

   They should work halfday on Sunday and another day on some other day to be determined by the Municipal Councils (to equal 8 hours work) Half-a-day.holiday should be given the next day on 15th August 26th January and 2nd October of each year.
8. Pourakarmikas carrying rubbish in vehicle should be with one pair of rubber hand gloves, face-protections and gumboat, in addition to the usual uniforms given to all other categories.
9. While distributing sites, preference should be given to the Pjourakarmikas.

10. If there are quarters belonging to the Municipalities, they should be allotted to the sweepers and scavengers, and other civic amounting may also be provided immediately.
11. The Municipalities may construct community halls containing a radio set, a handicraft section for women and girls and gymnasium depending upon their financial position. The Corporation of the City of Bangalore should build a community hall at Jakkarayanakere Gowripalya within a month.
12. The Municipal quarters constructed for this employees should be allotted to Pourakarmikas and other employees. As far its possible, the quarters of Pourakarmikas should not be side by side.
13. The Municipalities and Corporation should give a guarantee for salary deductions, so that the Nationalised Banks may come forward to give loans on long term period and recoverable in easy instalments.
14. The Medical expenditure incurred by the Pourakarmikas should be re-imbursed in accordant with the Medical re-imbursement rules.
15. The Municipalities should extend all facilities to the children of Pourakarmikas upto the age of college going stage by way of giving free clothing books and hostel facilities. This expenditure should be met out of the 18% budget provisions of the Municipalities.
16. Encouragement should be given to educate the Pourakarmikas on the evils of the large families.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ,ಈ ರಾಜ್ಯದಲ್ಲಿ ಜೀತ ಪದ್ಧತಿ ಏನಾದರೂ ಒಂದು ಕ್ಷೇತ್ರದಲ್ಲಿದೆ ಎಂದು ಹೇಳಿದರೆ ಅದು ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿ ಮಟ್ಟದಲ್ಲಿದೆ. ಕಳೆದ 20 ವರ್ಷಗಳಿಂದ ಯಾವುದೇ ರೀತಿಯ ಹೊಸ ನೇಮಕಾತಿ ಈ ಕ್ಷೇತ್ರದಲ್ಲಿ ಆಗಿಲ್ಲ. ಐಪಿಡಿ ಸಾಲಪ್ಪನವರ ವರದಿಯನ್ನು ಕರ್ನಾಟಕ ಸರ್ಕಾರ ಒಪ್ಪಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಇತ್ತೀಚೆಗೆ ಪೌರ ಕಾರ್ಮಿಕರ ವಿರೋಧಿತನವನ್ನು ಮತ್ತು ದಲಿತ ವಿರೋಧಿ ನೀತಿಯನ್ನು ಅನುಸರಿಸುವ ಒಂದು ಆಜ್ಞೆ ಪೌರಾಡಳಿತ ಇಲಾಖೆಯಿಂದ ಹೊರ ಹೊಮ್ಮಿದೆ. ಅಂದರೆ 700 ಜನರಿಗೆ ಒಬ್ಬ ಪೌರ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳಬೇಕೆನ್ನುವುದನ್ನು ಸರ್ಕಾರ ಒಪ್ಪಿದೆ.

ಆದರೆ, ಕಳೆದ ವರ್ಷ ಸೆಪ್ಟೆಂಬರ್ ತಿಂಗಳಿನಲ್ಲಿ ಪೌರಾಡಳಿತ ಇಲಾಖೆ ಒಂದು ಆದೇಶ ಹೊರಡಿಸಿದೆ. ಒಂದು ಸಾವಿರ ಜನಸಂಖ್ಯೆಗೆ ಒಬ್ಬ ನೌಕರನನ್ನು ನೇಮಕ ಮಾಡುತ್ತೇವೆಂದು ಒಂದು ಆದೇಶ ಹೊರಡಿಸಿದ್ದಾರೆ. ಐಪಿಡಿ ಸಾಲಪ್ಪನವರ ವರದಿಯಲ್ಲಿ ಏನು 700 ಜನಸಂಖ್ಯೆಗೆ ಒಬ್ಬ ಪೌರ ಕಾರ್ಮಿಕನನ್ನು ನೇಮಕಾತಿ ಮಾಡುತ್ತೇವೆಂದು ಹೇಳಿದ್ದಾರೆ, ಆ ರೀತಿ ಅವರ ನೇಮಕಾತಿ ಆಗಿದೆಯೇ? ಅದು ಆಗಲಿಲ್ಲ. ಮುಂದಿನ ನನ್ನ ಪ್ರಶ್ನೆ ಏನೆಂದರೆ, ಕಳೆದ 20 ವರ್ಷಗಳಿಂದ ಆ ಪೌರ ಕಾರ್ಮಿಕರನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಇಲ್ಲಿ ನಡೆದಿಲ್ಲ. ಸ್ವಚ್ಛತಾ ಕಾರ್ಯವನ್ನು ಒಬ್ಬ ಶ್ರೀಮಂತನಿಗೆ, ಗುತ್ತಿಗೆದಾರರಿಗೆ ಕೊಡುತ್ತಿದ್ದಾರೆ. ಆತ ಲಕ್ಷಾಂತರ ರೂಪಾಯಿಗಳನ್ನು ಅಲ್ಲಿ ಲೂಟಿ ಮಾಡಿಕೊಂಡು ಹೋಗುತ್ತಿದ್ದಾನೆ. ಅಲ್ಲಿ ಕಸ ಗುಡಿಸುವ ಕೆಲಸವನ್ನು ಅಮಾಯಕದಿಂದ ಮಾಡಿಸಿಕೊಂಡು 300–400 ರೂಪಾಯಿಗಳ ಕೂಲಿ ಕೊಡುವ ಜೀತಗಾರಿಕೆ ಅಲ್ಲಿಟ್ಟುಕೊಂಡು ಇವತ್ತು ಜೀವಂತವಾಗಿ ಅವರನ್ನು ದುಡಿಸಿಕೊಳ್ಳುವ ಕೆಲಸ ನಗರಸಭೆ, ಪುರಸಭೆಯಲ್ಲಿ ನಡೆಯುತ್ತಿದೆ. ಆದುದರಿಂದ, ಗುತ್ತಿಗೆ ಆಧಾರವನ್ನಿಟ್ಟುಕೊಂಡು ಮಾಡುವ ಪದ್ಧತಿಯನ್ನು ತೆಗೆದು ಹಾಕಿ, ನೀವು ನಿಜವಾಗಲೂ ಐಪಿಡಿ ಸಾಲಪ್ಪನವರ ವರದಿಯನ್ನು ಒಪ್ಪಿದ್ದರೆ, ಅದರ ಪ್ರಕಾರ ಜನಸಂಖ್ಯೆಗನುಗುಣವಾಗಿ 700 ಜನರಿಗೆ ಒಬ್ಬ ಪೌರ ಕಾರ್ಮಿಕನನ್ನು ಖಾಯಂ ಆಗಿ ನೇಮಕ ಮಾಡಿಕೊಳ್ಳಬೇಕೆಂದು ಹೇಳಿ ನಿಮ್ಮಲ್ಲಿ ಒತ್ತಾಯಿಸುತ್ತೇನೆ. ಜೊತೆಗೆ, ಇವರ ಆರೋಗ್ಯವನ್ನು ಕಾಪಾಡಬೇಕೆಂದು ವಿಶೇಷವಾಗಿ ಹೇಳಿದ್ದಾರೆ. ಅವರ ಆರೋಗ್ಯ ಕಾಪಾಡಲು ಯಾವುದೇ ರೀತಿಯಿಂದ ಸರ್ಕಾರದ ನೆರವು, ನಗರಸಭೆ ನೆರವು ಇಲ್ಲಿಯವರೆಗೆ ದೊರೆತಿಲ್ಲ. ಕಾಲ್ಮಡಿಗೆ ಕಸ ಗುಡಿಸುವವರಿಗೆ, ಎಲ್ಲಾ ರೀತಿಯ ಸೌಕರ್ಯವಿದೆ. ಬೀದಿಯಲ್ಲಿ ಕಸ ಗುಡಿಸುವವರಿಗೆ, ಮಲ ಹೊರುವವರಿಗೆ....

ಅಧ್ಯಕ್ಷರು : ಆಂಜನೇಯರವರೇ, ಪ್ರಶ್ನೆಯನ್ನು ಸಂಕ್ಷಿಪ್ತವಾಗಿ ಕೇಳಿ.

ಶ್ರೀ ಹೆಚ್. ಆಂಜನೇಯ : ಸರ್ಕಾರಿ ನೌಕರರಿಗೆ ಏನು ಸೌಲಭ್ಯ ಸಿಗುತ್ತದೆ, ಅದೇ ರೀತಿಯಲ್ಲಿ ಪೌರ ಕಾರ್ಮಿಕರಿಗೆ ಐಪಿಡಿ ಸಾಲಪ್ಪ ವರದಿಯಲ್ಲಿ ಹೇಳಿರುವಂತೆ ತಾವು ಇವರಿಗೂ ಎಲ್ಲಾ ಸವಲತ್ತುಗಳನ್ನೂ ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಧರ್ಮಸಿಂಗ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಲಾಗಿದೆ. ಐಪಿಡಿ ಸಾಲಪ್ಪನವರ ವರದಿಯನ್ನು ಕರ್ನಾಟಕ ಸರ್ಕಾರ ಒಪ್ಪಿದೆ. ದಿವಂಗತ ಬಸವಲಿಂಗಪ್ಪನವರ ಕಾಲದಲ್ಲಿ ಮಲ ಹೊತ್ತು ಮಾಡುವ ಕೆಲಸ ಕಾರ್ಯಗಳೇನಿವೆ ಮೊಟ್ಟ ಮೊದಲನೆಯದಾಗಿ ಅವರು ಪೌರಾಡಳಿತ ಸಚಿವರಾಗಿದ್ದಾಗ ಅದನ್ನು ನಿಲ್ಲಿಸಿದ್ದರು. ಆಗ ನಾನೂ ಕೂಡ ಒಬ್ಬ ಶಾಸಕನಾಗಿದ್ದೆ. ಐಪಿಡಿ ಸಾಲಪ್ಪನವರೂ ಕೂಡ ಶಾಸಕರಾಗಿದ್ದರು. ಅವರು ಬಸವಲಿಂಗಪ್ಪನವರಿಗೆ ಬಹಳ ಬೇಕಾದವರು. ಅದಕ್ಕೆ ಐಪಿಡಿ ಸಾಲಪ್ಪನವರ ನೇತೃತ್ವದಲ್ಲಿ ಸ್ಕ್ಯಾವೆಂಜರ್ಸ್ ಮಲ ಹೊರುವುದನ್ನು ನಿಲ್ಲಿಸಿದ್ದು ಮತ್ತು ಅವರ ಸಕಲ ಕೆಲಸ ಕಾರ್ಯಗಳನ್ನು ಮಾಡಬೇಕೆನ್ನುವ ರೀತಿಯಲ್ಲಿ ಐಪಿಡಿ ಸಾಲಪ್ಪನವರ ನೇತೃತ್ವದಲ್ಲಿ ಸಮಿತಿ ರಚನೆ ಮಾಡಿದರು. ಐಪಿಡಿ ಸಾಲಪ್ಪನವರು ವರದಿ ಕೊಟ್ಟರು. ಈಗಾಗಲೇ ಏನೂ ಮಾಡಿಲ್ಲವೆಂದಲ್ಲ. ಪೂರ್ಣವಾಗಿ ಆಗಿದೆ ಎಂದು ಹೇಳುವ ಮಾತಿಗೆ ನಾನು ಒಪ್ಪುವವನೂ ಅಲ್ಲ. ಐಪಿಡಿ ಸಾಲಪ್ಪನವರು ವರದಿ ಕೊಟ್ಟ ಮೇಲೆ ಇವತ್ತು ಜನಾಭಿಪ್ರಾಯ, ಅನಿಸಿಕೆ ಮೂಡಿಸುವ ರೀತಿಯಲ್ಲಿ ಸರ್ಕಾರ ಕೆಲಸ ಮಾಡಲು ಹೊರಟಿದೆ. ನಾವು ಈಗಾಗಲೇ 32 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಬೇರೆ ಬೇರೆ ಕಡೆ 64 ಸಾವಿರ ಲೆಟ್ರೀನ್ ಕಟ್ಟಿಸುವ ಕಾರ್ಯಕ್ರಮವಿದೆ. ಅವರಿಗೆ

ಗ್ಲೋವ್ಸ್ ಕೊಡುವುದು, ಬೇರೆ ಬೇರೆ ಯಾವ ರೀತಿಯಾಗಿ ಸ್ವಚ್ಛತೆಯ ದೃಷ್ಟಿಯಿಂದ ಕೆಲವು ರೆಕಮೆಂಡೇಷನ್ಸ್ ಇದೆ ಅದನ್ನು ಅನುಷ್ಠಾನಕ್ಕೆ ತರುವ ಪ್ರಯತ್ನ ಮಾಡಿದ್ದಾರೆ. ಇಷ್ಟಕ್ಕೆ ನನಗೆ ಸಂತೋಷವಾಗುತ್ತಿಲ್ಲ ಇದನ್ನು ನಿಮ್ಮ ಮುಂದೆ ಹೇಳುತ್ತಿಲ್ಲ. ಪೂರ್ವಭಾವಿಯಾಗಿ ನಮ್ಮ ಅಧಿಕಾರಿಗಳ ಜೊತೆ ಮಾಡುವ ಕೆಲಸಕಾರ್ಯಗಳಲ್ಲಿ they require a comitment ಸಾಲಪ್ಪನವರ ವರದಿ ಇದು ಬಹಳ ವಿಶೇಷವಾಗಿ ಹರಿಜನ-ಗಿರಿಜನರಿಗೆ ಮತ್ತು ದೇವರಾಜ ಅರಸುರವರು ಮುಖ್ಯಮಂತ್ರಿಗಳಾಗಿದ್ದಾಗ ಬಸವಲಿಂಗಪ್ಪನವರಂಥ ಧೀಮಂತ ನಾಯಕರು ಇದರ ಬಗ್ಗೆ ಕಾರ್ಯಕ್ರಮ ಕೈಗೊಂಡಿದ್ದರು. ಇದು ಸುಮ್ಮನೆ ಏನು ಪ್ರಶ್ನೆ ಕೇಳುತ್ತಾರೆ ಉತ್ತರ ಹೇಳತಕ್ಕಂಥದ್ದು ಅಲ್ಲ. ಇದಕ್ಕೆ ಒಂದು ಸಭೆ ನಡೆಸಿ ಎಲ್ಲಾ ವಿರೋಧ ಪಕ್ಷಗಳ ನಾಯಕರನ್ನು ಕರೆಸಿ, ಇಲಾಖಾಧಿಕಾರಿಗಳನ್ನು ಕರೆಸಿ ಸಾಲಪ್ಪನವರು ಏನು ವರದಿ ಕೊಟ್ಟಿದ್ದಾರೆ, ಅದು ಎಲ್ಲಿಯವರೆಗೆ ಕಾರ್ಯಗತವಾಗಿದೆ ಎಂಬುದರ ಬಗ್ಗೆ ಚರ್ಚೆ ಮಾಡುತ್ತೇವೆ. ಇದು ಪ್ರಾರಂಭವಾಗಿದೆ. ಈ ದೇಶದಲ್ಲಿ ಎಲ್ಲವೂ ಒಮ್ಮಿಂದೊಮ್ಮೆ ಆಗುವುದಿಲ್ಲ ಇದಕ್ಕೆ ಸಮಯ ಹಿಡಿಯುತ್ತದೆ. ನಾನು ಎಷ್ಟೋ ಸಲ ಹೇಳಿದ್ದೇನೆ, ನಾವು ಪ್ರಜಾಪ್ರಭುತ್ವದಲ್ಲಿ. ಮುಖ್ಯಮಂತ್ರಿಗಳಾಗಲಿ, ವಿರೋಧ ಪಕ್ಷದ ನಾಯಕರಾಗಲಿ ಮತ್ತು ಬೇರೆ ಪಕ್ಷದಲ್ಲಿ ಇರುವ ಶಾಸಕರ ಮನಸ್ಸಿನಲ್ಲಿರುವ ಭಾವನೆಗಳು ಅನುಷ್ಠಾನಕ್ಕೆ ಬರಬೇಕಾದರೆ, ಅಧಿಕಾರಿಗಳಲ್ಲೂ ಕೂಡ bureaucratic commitment - ಬೇಕಾಗುತ್ತದೆ. ಅಷ್ಟೇ ಒಂದು ಛಲ ಮತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡಿದರೆ ಇವೆಲ್ಲಾ ಕಾರ್ಯಗತವಾಗುತ್ತದೆ. ಅದಕ್ಕೆ ಮೊನ್ನೆ ಕೂಡ 18 ಪರ್ಸೆಂಟ್ ಹಣ ಖರ್ಚು ಮಾಡುವ ರೀತಿಯಲ್ಲಿ ಕಟ್ಟುನಿಟ್ಟಾದ ಕ್ರಮ ಕೈಗೊಂಡಿದ್ದೇವೆ. ನಾನೂ ಕೂಡ ನಗರಾಭಿವೃದ್ಧಿ ಸಚಿವನಾಗಿದ್ದಾಗ social-Justice committee ಎಂದು ತಿದ್ದುಪಡಿ ಮಾಡಿದ್ದೆ. ಇವತ್ತು ಏನು ನಾವು ಎಷ್ಟು ಅಭಿವೃದ್ಧಿ ಮಾಡಿದರೂ ಕೂಡ ವಿಶೇಷವಾದ 18 ಪರ್ಸೆಂಟ್ ಹಣ ಖರ್ಚು ಮಾಡುವ ರೀತಿಯಲ್ಲಿ ಎಲ್ಲವೂ ಕೂಡ ಇದೆ. ಮೊನ್ನೆ ಮಾನ್ಯ ಪುಟ್ಟಣ್ಣಯ್ಯನವರು, ದಲಿತ ಸಂಘರ್ಷ ಸಮಿತಿಯ ನಾಯಕರ ಜೊತೆಯಲ್ಲಿ ಕೂಡ ಮಾತನಾಡಿದ್ದೇನೆ. ನಾನು ಮಾನ್ಯ ಅಂಜೇನೇಯರವರೇನು ಪ್ರಶ್ನೆ ಕೇಳಿದರು ಅದಕ್ಕೆ ನಾನು ಒಪ್ಪುತ್ತೇನೆ, ಇದಕ್ಕೆ ಒಂದು ಸಭೆ ಕರೆಸುತ್ತೇನೆ, ಆ ಸಭೆಯಲ್ಲಿ ಚರ್ಚೆ ಮಾಡಿ ಮುಂದೆ ಒಂದು ನಿರ್ದಿಷ್ಟವಾದ ಕಾರ್ಯಕ್ರಮಗಳ ಜೊತೆ ಯಾವ ರೀತಿಯಾಗಿ ಮುಂದೆ ಹೋಗಬೇಕೆನ್ನುವ ರೀತಿಯಲ್ಲಿ ಚರ್ಚೆ ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ಇಲ್ಲಿ ಎರಡು ಸಮಸ್ಯೆಗಳು ಇವೆ. ಇದರಲ್ಲಿ ಕೆಲವರನ್ನು ಖಾಯಂ ಮಾಡಲಿಕ್ಕೆ ಸರ್ಕಾರದ ಆದೇಶವಾಗಿತ್ತು, ಕೆಲವು ಪುರಸಭೆಯವರು ಲಿಸ್ಟ್ ಮಾಡಿ ಡಿಸಿ ಗೆ ಕಟ್-ಆಫ್-ಡೇಟ್‌ನಲ್ಲಿ ಕಳುಹಿಸಲಿಲ್ಲ ಎನ್ನುವ ಒಂದು ಕಾರಣಕ್ಕೆ ಸುಮಾರು ಪುರಸಭಾ ಪೌರ ಕಾರ್ಮಿಕರು ಹಾಗೆಯೇ ಉಳಿದುಕೊಂಡಿದ್ದಾರೆ. ವೇಕೆನ್ಸಿ ಇದ್ದರೂ ಅವರುಗಳು ಹಾಗೆಯೇ ಉಳಿದಿದ್ದಾರೆ. ಮತ್ತೆ ಅವರಿಗೆ ಕೊಡುತ್ತಿದ್ದ ಕೆಲಸವೂ ಕೂಡ ಇಂದು ಗೊಂದಲಕ್ಕೆ ಬಂದಿದೆ. ಕಂಟ್ರಾಕ್ಟ್ ಕೊಡಬೇಕು ಪುರಸಭೆಗಳ ನೀರು ಬಿಡಲಿಕ್ಕೆ ಮತ್ತು ಕ್ಲೀನ್ ಮಾಡಲಿಕ್ಕೆ ಎಂದು, ನಿರ್ಧಾರ ತೆಗೆದುಕೊಂಡಿರುವುದರಿಂದ ಇವರ ಸ್ಥಿತಿಯೇನು ಎಂಬುದು ಗೊತ್ತಿಲ್ಲ. ಮೂರನೆಯದು, ಅವರಿಗೆ ಕನಿಷ್ಠ ಯೂನಿಫಾರಂ, ಶೂ, ಕೊಡುವ ವ್ಯವಸ್ಥೆಯನ್ನು ಪುರಸಭೆಯವರು ಮಾಡುತ್ತಿಲ್ಲ. ಇದರಲ್ಲಿ ಬಹುತೇಕ ಸುಮಾರು 80 ರಿಂದ 90 ರಷ್ಟು ಜನ ಷೆಡೂಲ್ಡ್ ಕಾಸ್ಟ್ ಜನ ಇದ್ದಾರೆ. ಆ ಒಂದು ಕಟ್-ಆಫ್-ಡೇಟ್ ಎಕ್ಸ್‌ಟೆಂಡ್ ಮಾಡಿ, ಎಲ್ಲೆಲ್ಲಿ ವೇಕೆನ್ಸಿ, ಎಲ್ಲೆಲ್ಲಿ ಪುರಸಭೆಯಲ್ಲಿ resolution ಆಗಿದೆ ಅವರನ್ನಾದರೂ ಖಾಯಂ ಮಾಡುವುದಕ್ಕೆ ತಾವು ಕ್ರಮ ಜರುಗಿಸುತ್ತೀರಾ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈಗ ಕಾಂಟ್ರಾಕ್ಟ್ ಕೊಡತಕ್ಕಂಥದ್ದನ್ನು ತಪ್ಪಿಸಬೇಕು. ಇವರ ಹಣವನ್ನು ಕಂಟ್ರಾಕ್ಟರ್ ಹೊಡೆಯುತ್ತಾನೆ. ಇವರಿಗೆ ಹಣ ಹೋಗುವುದಿಲ್ಲ. ಹಿಂದಿನಿಂದ ಕೆಲಸ ಮಾಡುತ್ತಿದ್ದವರನ್ನು ಕಂಟ್ರಾಕ್ಟರ್ ಕೆಲಸಕ್ಕೆ ಕರೆಯುವುದಿಲ್ಲ. ಹೊಸಬರನ್ನು ಕೆಲಸಕ್ಕೆ ನೇಮಿಸಿಕೊಳ್ಳುತ್ತಾನೆ. ಹಾಗಾಗಿ ಹಲವಾರು ವರ್ಷಗಳಿಂದ ಕೆಲಸ ಮಾಡಿರತಕ್ಕಂಥವರಿಗೆ ಕೆಲಸವೂ ಇಲ್ಲ, ಅವರು ಖಾಯಂ ಇಲ್ಲ, ಇವನು ಕಾಂಟ್ರಾಕ್ಟರ್ ಹೊಸ ಕೆಲಸಗಾರರ ಹೆಸರಿನಲ್ಲಿ ದಂಧೆ ಮಾಡುತ್ತಾನೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಕಾಂಟ್ರಾಕ್ಟ್ ಕೊಡತಕ್ಕಂಥ ಪದ್ಧತಿಯನ್ನು ತಪ್ಪಿಸಬೇಕು, ಹಿಂದಿನಿಂದ ಯಾರು ಕೆಲಸ ಮಾಡುತ್ತಿದ್ದರೋ ಅವರಿಗೆ ಕೊಡಬೇಕು, ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಕಟ್-ಆಫ್-ಡೇಟ್ ಅನ್ನು ರಿಲ್ಯಾಕ್ಸ್ ಮಾಡಿ ಅವರಿಗೆಲ್ಲಾ ಖಾಯಂ ಮಾಡಬೇಕು.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಪೌರ ಕಾರ್ಮಿಕರನ್ನು ನೇಮಕ ಮಾಡುವುದನ್ನು ರದ್ದು ಮಾಡಿ ಇಲಾಖೆಯಲ್ಲಿ 15 ವರ್ಷಗಳಾಗಿವೆ. ಆ ನಂತರ ಇದುವರೆವಿಗೂ ಪೌರ ಕಾರ್ಮಿಕರ ನೇಮಕಾತಿಯನ್ನು ಸರ್ಕಾರ ನಿಲ್ಲಿಸಿದೆ. ಆದರೆ ಇತ್ತೀಚಿಗೆ ಸಾಲಪ್ಪನವರ ವರದಿಯಂತೆ ಮುನಿಸಿಪಾಲಿಟಿಯಲ್ಲಿ 700 ಜನಕ್ಕೆ ಒಬ್ಬರಂತೆ ಕಾರ್ಪೊರೇಷನ್‌ನಲ್ಲಿ 500 ಜನಕ್ಕೆ ಒಬ್ಬರಂತೆ, ನೇಮಿಸಬೇಕೆಂದು ಹೇಳಿದೆ. ಆದರೆ, ಈಗ ಏನಾಗಿದೆ ಎಂದರೆ, ಆ ಒಂದು ಕೆಲಸ ಮಾಡುವುದು ದಲಿತರೇ. ಅವರಿಗೆ ಲೈಫ್ ಸೆಕ್ಯೂರಿಟಿಯೂ ಇಲ್ಲ, ಜಾಬ್ ಸೆಕ್ಯೂರಿಟಿಯೂ ಇಲ್ಲ. ಮತ್ತೊಂದು ಭಾಗದಿಂದ ಅವರ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಯಾವ ದಲಿತರು ಆ ಉದ್ಯೋಗವನ್ನು ಮಾಡುತ್ತಿದ್ದಾರೆ ಅದನ್ನು ಕಿತ್ತುಕೊಳ್ಳುತ್ತಿದ್ದಾರೆ. ಹಾಗೆಯೇ ಆರ್ಥಿಕವಾಗಿ ಅವನನ್ನು, ತುಳಿದು ಅವನ ಹಕ್ಕುಗಳನ್ನು ಕಿತ್ತುಕೊಳ್ಳುತ್ತಿದ್ದಾರೆ. ಸರ್ಕಾರ ನೇಮಕಾತಿ ಮಾಡಬೇಕಾಗುತ್ತದೆ. ಮಾನ್ಯ ಬಸವಲಿಂಗಪ್ಪನವರು ಹೇಳಿದ್ದು ಮಲವನ್ನು ತಲೆ ಮೇಲೆ ಹೊರಬಾರದು ಎಂದು. ಅದರ ಬಗ್ಗೆ ಹೋರಾಟ ನಡೆದಿತ್ತು. ಆದರೆ ಇವತ್ತು ಸರ್ಕಾರ ಅದನ್ನು ಮಾಡುವುದು ಬಿಟ್ಟು, ಯಾವುದೋ ಗುತ್ತಿಗೆದಾರನಿಗೆ ಕೊಟ್ಟಿದೆ. ಅದನ್ನು ರದ್ದು ಮಾಡಿ, ಸರ್ಕಾರವೇ ಅವರಿಗೆ ಜಾಬ್ ಹಾಗೂ ಲೈಫ್ ಸೆಕ್ಯೂರಿಟಿಯನ್ನು ಕೊಡಬೇಕು. ಈ ನಿಟ್ಟಿನಲ್ಲಿ ಸರ್ಕಾರ ಯೋಚಿಸಿ ನೇಮಕಾತಿ ಮಾಡಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎಸ್, ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಇದು ಬಹಳ ಗಂಭೀರವಾದ ಸಮಸ್ಯೆ. ಎಲ್ಲಾ ಸದಸ್ಯರ ಅಭಿಪ್ರಾಯವನ್ನು ಮಾನ್ಯ ಮುಖ್ಯಮಂತ್ರಿಗಳು ಕೇಳಿದರು. ತಮಗೆ ಗೊತ್ತಿರುವ ಹಾಗೆ ಜನಸಂಖ್ಯಾಧಾರದ ಮೇಲೆ ನಗರ ಸಭೆ, ಪುರಸಭೆ, ಮಹಾನಗರ ಸಭೆಯಲ್ಲಿ ಎಷ್ಟುಪೌರ ಕಾರ್ಮಿಕರು ಇರಬೇಕು ಅದರ ಹತ್ತು ಪಟ್ಟು ಜನಸಂಖ್ಯೆ ಇದ್ದರೂ ಅವನು ಒಬ್ಬರು ಇಬ್ಬರು ಇದ್ದರೂ ಆ ಕೆಲಸ ಮಾಡಿಕೊಂಡು ಹೋಗುತ್ತಿದ್ದಾನೆ. 15–20 ವರ್ಷಗಳಿಂದ ಕೆಲಸ ಮಾಡಿರತಕ್ಕಂಥ ಸಾವಿರಾರು ಉದಾಹರಣೆಗಳು ಇವೆ, ಅವರನ್ನು ಖಾಯಂ ಮಾಡಲಿಲ್ಲ ಇವತ್ತು ಅವರು ಡೈಲಿ ವೇಜಸ್ ನಲ್ಲಿ ಅವನು ಬದುಕುತ್ತಿದ್ದಾನೆ. ಆ ಕೆಲಸಗಾರರ ಮೇಲೆ ಇದೊಂದು ರೀತಿಯ ಅಮಾನುಷ್ಯವಾದ ನಡವಳಿಕೆ. ಅದಕ್ಕೆ ನಿಮ್ಮ ಕಾಲದಲ್ಲಿ ಆದರೂ ಇಷ್ಟು ವರ್ಷಗಳು ಕೆಲಸ ಮಾಡಿದಂಥವನಿಗೆ ಖಾಯಂ ಮಾಡುತ್ತೇವೆ, ಡೈಲಿ ವೇಜಸ್ ಮೇಲೆ ಇನ್ನು ಮೇಲೆ ತೆಗೆದುಕೊಳ್ಳುವುದಿಲ್ಲ, ಸರ್ಕಾರವೇ ನಿಗದಿ ಮಾಡಿರತಕ್ಕಂಥ ಜನಸಂಖ್ಯಾಧಾರದ ಮೇಲೆ ಪೌರ ಕಾರ್ಮಿಕರನ್ನು ನೇಮಕ ಮಾಡುತ್ತೇವೆ, ಈ ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ ಹಾಗೂ

ನೀವು ಸರ್ಕಾರಿ ಆದೇಶವನ್ನು ಹೊರಡಿಸಬೇಕಾಗುತ್ತದೆ. ಇದರ ಬಗ್ಗೆ ಸ್ಪಷ್ಟವಾದ ತಮ್ಮ ಉತ್ತರವೇನು ಎಂದು ಕೇಳಲಿಕ್ಕೆ ನಾನು ಇಚ್ಚಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪೌರ ಕಾರ್ಮಿಕರ ಅಭಿವೃದ್ಧಿಯ ಬಗ್ಗೆ ಸಾಲಪ್ಪನವರು ಸುಮಾರು 30 ವರ್ಷಗಳ ಹಿಂದೆ ಕೊಟ್ಟಂಥ ವರದಿ, ಇದರಲ್ಲಿ ಬಹುತೇಕ ಶಿಫಾರಸ್ಸುಗಳು ಕಾರ್ಯಗತವಾಗಿಲ್ಲ. ಹೀಗೇ ಪ್ರತಿ ವರ್ಷ ಮುಂದುವರಿಯುತ್ತಿದೆ ಸಾಲಪ್ಪ ವರದಿ ಎಲ್ಲೋ ಒಂದು ಕಡೆ ಧೂಳಿನಲ್ಲಿ ಕುಳಿತಿದೆ. ನಾನು ತಮಗೆ ಹೇಳುತ್ತಿದ್ದೇನೆ, ಎಷ್ಟೋ ಜನ ಪೌರ ಕಾರ್ಮಿಕರ ಮನೆಗೆ ಹೊರಟು ಹೋಗಿದ್ದಾರೆ, ಅವರ ಜೀವನ ಹಸನಾಗಿಲ್ಲ ಅವರ ಪರಿಸ್ಥಿತಿ ಹದಗೆಟ್ಟಿದೆ, ಅವರಿಗೆ ಮನೆಗಳು ಇಲ್ಲ, ಅಷ್ಟು ಹದಗೆಟ್ಟಿದೆ. ಅವರಿಗೆ ವಿಶೇಷವಾದಂಥ ಭತ್ಯೆ ಕೊಡಬೇಕು, ವಿಶೇಷವಾದಂಥ ಅನುಕೂಲಗಳನ್ನು ಕೊಡಬೇಕು, ವಿಶೇಷವಾದಂಥ ಮನೆಗಳನ್ನು ಕೊಡಬೇಕು, ಎಲ್ಲರಿಗಿಂತ ಬೇರೆ ಸರ್ಕಾರಿ ನೌಕರರಿಗಿಂತ ಇವರಿಗೆ ಬಹಳ ಹೆಚ್ಚಿನ ಭತ್ಯೆ ಕೊಡಬೇಕು. ಅದಕ್ಕೆ ವಿಶೇಷವಾದಂಥ ಸಹಾಯ ಸಹಕಾರ ಅನುದಾನ ಮತ್ತು ಅವರಿಗೆ ಭತ್ಯೆ ಕೊಡುವುದಕ್ಕೆ ಸರ್ಕಾರ ಸಿದ್ದ ಸಿದ್ದವಿದೆಯೇ?

ಅಧ್ಯಕ್ಷರು : ವಿಶೇಷವಾಗಿ ಎಂದರೆ ಬಹಳ ಸ್ಪಷ್ಟವಾಗಿ ಹೇಳಿ, ನಿಮ್ಮ ಮಾತಿನ ಅರ್ಥದಲ್ಲಿ ವಿಶೇಷ ಎಂದರೆ ಏನು?

ಶ್ರೀ ವಾಟಾಳ್ ನಾಗರಾಜ್ : ಅವರಿಗೆ ಹೆಚ್ಚಿನ ಒಳ್ಳೆಯ ಬೂಟ್ಸ್‌ಗಳನ್ನು ಕೊಡಬೇಕಾಗಿದೆ, ಬಟ್ಟೆಗಳನ್ನು ಕೊಡಬೇಕಾಗಿದೆ, ಉತ್ತಮ ಊಡುಪು, ಒಳ್ಳೆಯ ಮನೆಗಳನ್ನು ಹಾಗೂ ದೀಪಗಳನ್ನು ಕೊಡಬೇಕಾಗಿದೆ. ಅವರಿಗೆ ಉಚಿತವಾಗಿ ಭಾಗ್ಯಶ್ರೀ ಎಂದು ದೀಪಗಳನ್ನು ಕೊಡಬೇಕಾಗಿದೆ. ಅವರು ಇರುವ ಬಡಾವಣೆ ಏನು ಇದೆ ಆ ಬಡಾವಣೆಗೆ ಉತ್ತಮ ರಸ್ತೆಗಳು, ಕುಡಿಯುವ ನೀರಿನ ವ್ಯವಸ್ಥೆ ಇವೆಲ್ಲಾ ಮಾಡಿಕೊಡಬೇಕಾಗುತ್ತದೆ. ಅವರನ್ನು ಎಲ್ಲೋ ಒಂದು ರೀತಿ ಪೌರಕಾರ್ಮಿಕರು ಎಂದರೆ ಸಮಾಜದಿಂದ ದೂರಿಕರಿಸಿದ್ದೇವೆ. ಇದು ಒಳ್ಳೆಯದಲ್ಲ. ಅವರೂ ಸಮಾಜದ ಜೊತೆಯಲ್ಲಿರತಕ್ಕಂಥವರು, ಮಹಾತ್ಮಾ ಗಾಂಧೀಜಿಯವರ ಹೆಸರನ್ನು ನಾವು ಹೇಳಬೇಕು ಎನ್ನುವುದಾದರೆ, ಪೌರಕಾರ್ಮಿಕರಿಗೆ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಬೇಕು, ಅದಕ್ಕಾಗಿ ವಿಶೇಷವಾದಂಥ ಯೋಜನೆಯನ್ನು ಸರ್ಕಾರ ತಯಾರಿಸಿದಿಯೇ? ತಯಾರು ಮಾಡಿದ್ದರೆ ಮಾಡುತ್ತದೆಯೇ ಎಂದು ತಮ್ಮ ಮೂಲಕ ನಾನು ಸರ್ಕಾರವನ್ನು ಕೇಳಬಯಸುತ್ತೇನೆ.

ಶ್ರೀ ಎ. ಪಾಪರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರು ನಗರದಲ್ಲಿ 250 ಪೌರ ಕಾರ್ಮಿಕರು ಇದ್ದಾರೆ, 120 ಜನ ಈಗಾಗಲೇ ನಿವೃತ್ತಿ ಹೊಂದಿದ್ದಾರೆ, ಈಗ ಅಲ್ಲಿ ವಾರ್ಡ್ ವೈಸ್ ಖಾಸಗಿ ಕಾಂಟ್ರಾಕ್ಟ್‌ರ್ಸ್‌ರವರು ಕರೆಸಿ ಟೆಂಡರ್ ಕೊಟ್ಟು ಕೆಲಸ ಮಾಡುತ್ತಿದ್ದಾರೆ. ಪ್ರೈವೇಟ್ ಕಾಂಟ್ರಾಕ್ಟ್‌ರವರು 1800 ರೂಪಾಯಿ ಸಂಬಳ ಇದ್ದರೆ 1000 ರೂಪಾಯಿ ಕೊಟ್ಟು ಕೆಲಸ ಮಾಡಿಸುತ್ತಿದ್ದಾರೆ. ಅಲ್ಲಿ ಎಲ್ಲಾ ಕಂಟ್ರಾಕ್ಟ್ ನಗರ ಸಭಾ ಸದಸ್ಯರು ತೆಗೆದುಕೊಂಡು ಸ್ವಚ್ಛತಾ ಕೆಲಸ ನಿಂತು ಹೋಗಿದೆ, ಸ್ವಚ್ಚತಾ ಕೆಲಸ ಆಗುತ್ತಿಲ್ಲ, ಆ ಕಾರಣದಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ಈಗ ಎಲ್ಲಾ ಹೊಸದಾಗಿ ನಗರ ಸಭೆಯವರೇ ಅವರನ್ನು ಅಪಾಯಿಂಟ್‌ಮೆಂಟ್ ಮಾಡಬೇಕು, ಕಂಟ್ರಾಕ್ಟ್‌ರವರು ಮಾಡುವುದರಿಂದ ಎಲ್ಲಾ ಕಾಂಟ್ರಾಕ್ಟ್‌ರ್ಸ್ ನಗರ ಸಭೆಯ ಸದಸ್ಯರುಗಳು ಗುತ್ತಿಗೆದಾರರಾಗಿ ಊರಿನ ಸ್ವಚ್ಚತಾ ಆಗುತ್ತಿಲ್ಲ. ಆ ಕಾರಣದಿಂದ ಕಾಂಟ್ರಾಕ್ಟ್ ಪದ್ದತಿಯನ್ನು ರದ್ದು ಮಾಡಿ ಸರ್ಕಾರವೇ ವಹಿಸಿಕೊಳ್ಳಬೇಕೆಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಎನ್. ಯೋಗೇಶ್ ಭಟ್ : ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾ ನಗರ ಪಾಲಿಕೆಯಲ್ಲಿ ನೂರಕ್ಕಿಂತ ಹೆಚ್ಚು ಪೌರ ಕಾರ್ಮಿಕರು, ಅದರಲ್ಲಿ ಬಹುತೇಕ ಎಸ್‌ಸಿ–ಎಸ್‌ಟಿ ಯವರು. ಇಲ್ಲಿ ಸಮಸ್ಯೆ ಬಂದಿರುವುದು ಏನೆಂದರೆ, ಎಲೆಕ್ಟ್ರಿಕಲ್ ಸೆಕ್ಷನ್ ನಲ್ಲಿ ಕೆಲಸ ಮಾಡುತ್ತಿದ್ದಾರೆ, ಮೊನ್ನೆ ಷಾಕ್ ಹೊಡೆದು ಅಪಘಾತವಾಯಿತು, ಹೀಗಾಗಿ ಅವರ ಜೀವಕ್ಕೆ ಅಪಾಯ ಇದೆ. ಅಂಥ ಸನ್ನಿವೇಶದಲ್ಲಿ ಭದ್ರತೆ ಕೊಡುವ ಯಾವುದೇ ಕಾರ್ಯಕ್ರಮ ಆಗಿಲ್ಲ. ಕಳೆದ ಮೂರು ವರ್ಷಗಳಿಂದ ನಮ್ಮ ಎಂ.ಎಸ್. ಬಿಲ್ಡಿಂಗ್‌ನಲ್ಲಿ ಆ ಫೈಲ್ ಸುತ್ತಾಡುತ್ತಿದೆ. ಮಂಗಳೂರು ಮಹಾ ನಗರ ಪಾಲಿಕೆ ಅದಕ್ಕೆ ರೆಸಲ್ಯೂಷನ್ ಮಾಡಿದೆ, ಅವರನ್ನು ಖಾಯಂ ಮಾಡಬೇಕೆಂದು ನಿರ್ಣಯ ಮಾಡಿದ್ದರೂ ಕೂಡ ಯಾವುದೇ ರೀತಿಯಲ್ಲಿ ಅದಕ್ಕೆ ಅಧಿಕಾರಿಗಳಿಂದ ಸರಿಯಾದ ರೆಸ್ಪಾನ್ಸ್ ಸಿಗುತ್ತಿಲ್ಲ. ನಾನು ಕಳಕಳಿಯಿಂದ ಕೇಳುತ್ತಿದ್ದೇನೆ ಇಂಥದ್ದರ ಬಗ್ಗೆ ತುರ್ತಾಗಿ ಮಾನವೀಯತೆಯ ದೃಷ್ಟಿಯಿಂದ ಅದನ್ನು ಖಾಯಂಗೊಳಿಸುವಂಥ ಕಾರ್ಯವನ್ನು ಮಾಡಬೇಕು ಎನ್ನುವ ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಧರ್ಮಸಿಂಗ್ : ಸನ್ಮಾನ್ಯ ಅಧ್ಯಕ್ಷರೆ, ಈಗ ಐ.ಪಿ.ಡಿ. ಸಾಲಪ್ಪನವರು ಏನು ಒಂದು ವರದಿ ಕೊಟ್ಟಿದ್ದಾರೆ ಅದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಅದಕ್ಕೆ ಪ್ರಾಮಾಣಿಕತೆಯಿಂದ ಹೇಳುವುದಾದರೆ, ನೋಡುತ್ತೇನೆ, ಮಾಡುತ್ತೇನೆ, ಎಂದು ಹೇಳುವುದಲ್ಲ. ಇದಕ್ಕೆ ಸಮಗ್ರವಾಗಿ ಐ ಪಿ ಡಿ ಸಾಲಪ್ಪನವರ ವರದಿಯನ್ನು ನೋಡಬೇಕಾಗುತ್ತದೆ. ಅವರ ಶಿಫಾರಸ್ಸುಗಳನ್ನು ಎಲ್ಲಿಯವರೆಗೆ ಜಾರಿಗೆ ಆಗಿವೆ ಎಂಬುದನ್ನು ನೋಡಬೇಕಾಗುತ್ತದೆ. ಕಟ್–ಆಫ್–ಡೇಟ್ ಬಗ್ಗೆ ಹೇಳಿದರು, ಸುಪ್ರೀಂ ಕೋರ್ಟು 1–1–1986 ಗೆ ಎಂದು ಹೇಳಿದ್ದಾರೆ. ಆದರೂ ಕೂಡ ಸಾಕಷ್ಟು ಜನ ಇದ್ದಾರೆ, ಇವೆಲ್ಲಾ ಏನಾಗುತ್ತದೆ ಎಂದರೆ, ಪುರಸಭೆಯಲ್ಲಿ ಕಾರ್ಪೊರೇಷನ್‌ನಲ್ಲಿ ಬೇರೆ ಕಡೆಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಸಾಲಪ್ಪನವರ ವರದಿ ಏನಾಗಿದೆ ಎಂದು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಹೇಗೆ ವಿಧಾನ ಸಭೆಯಲ್ಲಿ ಅವಕಾಶ ಇದೆಯೋ ಹಾಗೆ ಇದೆ. ಇದನ್ನು ಮಾಡದೆ, ನಮ್ಮ ಒಬ್ಬರು ಸದಸ್ಯರು, ಮಂಗಳೂರು ಕಾರ್ಪೊರೇಷನ್ ನಲ್ಲಿ ಮಾಡಿದ ಬಗ್ಗೆ ಹೇಳಿದರು, ಅವರೂ ಕೂಡ ಇದು ಎಲ್ಲಾ ಪ್ರತಿಯೊಂದು ಹಂತದಲ್ಲಿ ಚರ್ಚೆ ಮಾಡಿ, ಅವರ ಸಮಸ್ಯೆಗಳು ಏನು ಎಂಬುದನ್ನು ಸರ್ಕಾರಕ್ಕೆ ಕಳುಹಿಸಿಕೊಟ್ಟರೆ ಕ್ರಮ ತೆಗೆದುಕೊಳ್ಳುವುದಕ್ಕೆ ಒಳ್ಳೆಯದಾಗುತ್ತದೆ. ಐ ಪಿ ಡಿ ಸಾಲಪ್ಪನವರ ವರದಿಯ ಬಗ್ಗೆ ನಮ್ಮ ಎಲ್ಲಾ ವಿರೋಧ ಪಕ್ಷದವರ ನಾಯಕರನ್ನು ಒಂದು ಸಭೆಗೆ ಕರೆಸಿ ಈ ವಿಧಾನ ಸಭೆ ಮುಗಿದು ಹೋದ ಮೇಲೆ 6 ಗಂಟೆಯ ನಂತರ, ತಾವು ಮಾನ್ಯ ಸಭಾಧ್ಯಕ್ಷರು ಬಂದರೂ ಸರಿ ಆಗುತ್ತದೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡಿ, ಇದರ ಫೈನಾನ್ಸಿಯಲ್ ಇಂಪ್ಲಿಕೇಷನ್ ನೋಡೋಣ. ಏಕೆಂದರೆ, ಈಗಾಗಲೇ ಸುಪ್ರೀರಿ ಕೋರ್ಟಿನ ಆದೇಶ ಕೊಟ್ಟ ಮೇಲೆ ಎಷ್ಟು ಜನರಿಗೆ ಏನೇನು ಆಗುತ್ತದೆ ಇವೆಲ್ಲಾ ನೋಡಬೇಕಾಗುತ್ತದೆ. ಇವೆಲ್ಲಾ ನೋಡಿ ನಾವು ಎಷ್ಟರಮಟ್ಟಿಗೆ ಇದನ್ನು ಮಾಡಬಹುದು ಎಷ್ಟರಮಟ್ಟಿಗೆ ನಾವು ಶಿಫಾರಸ್ಸಿಗೆ ಒಪ್ಪಬಹುದು ಎನ್ನುವುದು ಅಂತಿಮವಾಗಿ ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯವಾಗುತ್ತದೆ. ಆ ತರಹದ ಒಂದು ವ್ಯವಸ್ಥೆ ನಾವು ಮಾಡೋಣ.

ಸವದತ್ತಿ ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಂಜುರಾತಿ

16 (441) : ಶ್ರೀ ಮಾಮನಿ ವಿಶ್ವನಾಥ ಕರಬಸಪ್ಪ (ಪರಾಸಗಡ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಸವದತ್ತಿ ಪಟ್ಟಣ 38,212 ರಷ್ಟು ಜನಸಂಖ್ಯೆ ಹೊಂದಿದ್ದು, ಧಾರ್ಮಿಕ ಸ್ಥಳವಾದ ಕಾರಣ ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುತ್ತಿರುವುದು ನಿಜವಲ್ಲವೇ;